# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2021-22ನೇ ಸಾಲಿನ ಆಯವ್ಯಯದಲ್ಲಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗೆ ಲೆಕ್ಕಶೀರ್ಷಿಕೆ: 2515-00-102-0-08 ರಡಿ ಒದಗಿಸಿರುವ ಅನುದಾನದಲ್ಲಿ ನಾಲ್ಕನೇ ಕಂತಿನ ಅನುದಾನವನ್ನು ಬಿಡುಗಡೆಗೊಳಿಸುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪಂರಾ 242 ಜಿಪಸ 2021, ದಿನಾಂಕ:30-10-2021.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪಂರಾ 242 ಜಿಪಸ 2021, ದಿನಾಂಕ:31-05-2021.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪಂರಾ 242 ಜಿಪಸ 2021, ದಿನಾಂಕ:16-07-2021.
4. ನಿರ್ದೇಶಕರು, ಇವರು ಪತ್ರ ಸಂಖ್ಯೆ:SIRD/ACT/CR-05/2021-22,ದಿನಾಂಕ:27-01-2022.
5. ಸರ್ಕಾರದ ಆದೇಶ ಸಂ:ಎಫ್‌ಡಿ 1 ಟಿಎಫ್‌ಪಿ 2021, ದಿನಾಂಕ:31-12-2021.

**ಪ್ರಸ್ತಾವನೆ:**

2021-22ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಂಸ್ಥೆಗೆ, ಪ್ರಾದೇಶಿಕ ಕೇಂದ್ರಗಳಾದ ಕಲುಬುರಗಿ ಮತ್ತು ಧಾರವಾಡ ಹಾಗೂ ರಾಜ್ಯ ಪಂಚಾಯತ್ ಸಂಪನ್ಮೂಲ ಕೇಂದ್ರ, ಬೆಂಗಳೂರು ಇಲ್ಲಿನ ಆಡಳಿತಾತ್ಮಕ ಮತ್ತು ಅಧಿಕಾರಿ/ಸಿಬ್ಬಂದಿಗಳ ವೇತನ ಲೆಕ್ಕ ಶೀರ್ಷಿಕೆ 2515-00-102-0-08ರ ಉಪ ಶೀರ್ಷಿಕೆ "101" (ಸಹಾಯಾನುದಾನ-ವೇತನಗಳು) ರಡಿ ರೂ.474.00 ಲಕ್ಷ, "103" (ಸಹಾಯಾನುದಾನ-ಸಾಮಾನ್ಯ) ರಡಿ ರೂ.101.00 ಲಕ್ಷ ಹಾಗೂ ಉಪ ಶೀರ್ಷಿಕೆ "115" (ಸಹಾಯಾನುದಾನ-ಗುತ್ತಿಗೆ/ಹೊರಗುತ್ತಿಗೆ) ರಡಿಯಲ್ಲಿ ರೂ.156.00 ಲಕ್ಷ ಮತ್ತು ಉಪ ಶೀರ್ಷಿಕೆ "386" (ನಿರ್ಮಾಣ) ರಡಿಯಲ್ಲಿ ರೂ.800.00 ಲಕ್ಷಗಳಂತೆ ಒಟ್ಟು ರೂ.1531.00 ಲಕ್ಷ ಅನುದಾನವನ್ನು ನಿಗಧಿಪಡಿಸಲಾಗಿದ್ದು, ಮೇಲೆ ಓದಲಾದ (1), (2) ಮತ್ತು (3)ರ ಸರ್ಕಾರದ ಆದೇಶಗಳನ್ವಯ ಉಲ್ಲೇಖಿತ ಲೆಕ್ಕಶೀರ್ಷಿಕೆಯಡಿ ಮೊದಲನೇ, ಎರಡನೇ ಹಾಗೂ ಮೂರನೇ ತ್ರೈಮಾಸಿಕ ಕಂತಿನ ಅನುದಾನ ರೂ.1148.25 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ.

ಮೇಲೆ ಓದಲಾದ(4)ರ ಪತ್ರದಲ್ಲಿ 2021-22ನೇ ಸಾಲಿನ ಆಯವ್ಯಯದಲ್ಲಿ 1531.00 ಲಕ್ಷ ಹಂಚಿಕೆಯಾಗಿದ್ದು, ಈವರೆಗೆ ಮೂರು ಕಂತುಗಳಲ್ಲಿ (ಏಪ್ರಿಲ್-2021 ರಿಂದ ಡಿಸೆಂಬರ್-2021ರ ವರೆಗೆ) ರಾಜ್ಯ ಸರ್ಕಾರದಿಂದ ಒಟ್ಟು ರೂ.1148.25 ಲಕ್ಷಗಳ ಅನುದಾನವು ಸಂಸ್ಥೆಗೆ ಬಿಡುಗಡೆಯಾಗಿದ್ದು, ಮೊದಲನೇ, ಎರಡನೇ ಹಾಗೂ ಮೂರನೇ ಕಂತಿನ ಅನುದಾನವಾಗಿ ಬಿಡುಗಡೆಯಾಗಿರುವ ಮೊತ್ತ ರೂ.1148.25 ಲಕ್ಷಗಳು ಹಾಗೂ ಹಿಂದಿನ ಸಾಲಿನ ಉಳಿತಾಯ ಮೊತ್ತ ರೂ.126.82 ಲಕ್ಷಗಳ ಒಟ್ಟು ಮೊತ್ತ ರೂ.1275.81 ಲಕ್ಷಗಳಲ್ಲಿ ರೂ.1195.00 ಲಕ್ಷಗಳು ಬಳಕೆಯಾಗಿರುವ ಬಗ್ಗೆ ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ ಹಾಗೂ ಈಗಾಗಲೇ ಬಿಡುಗಡೆಯಾಗಿರುವ ಅನುದಾನದಲ್ಲಿ ಅಂದಾಜು ಒಂದು ಕೋಟಿ ಲಭ್ಯವಿದ್ದು, ಸಂಸ್ಥೆಯಲ್ಲಿ ಕರ್ತವ್ಯ

ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ ಈ ಮಾಹೆಯ ವೇತನ ಹಾಗೂ ಇತರೆ ವೆಚ್ಚಗಳನ್ನು ಭರಿಸಲು ವೆಚ್ಚವಾಗಲಿದೆ ಎಂದು ತಿಳಿಸುತ್ತಾ ಬಾಕಿ ಇರುವ ನಾಲ್ಕನೇ ಕಂತಿನ ಅನುದಾನವನ್ನು ಸಂಸ್ಥೆಗೆ ಬಿಡುಗಡೆಮಾಡಬೇಕೆಂದು ನಿರ್ದೇಶಕರು, ಅ.ನ.ಸಾ.ರಾ.ಗ್ರಾ & ಪಂ.ರಾ ಸಂಸ್ಥೆ, ಮೈಸೂರು ಇವರು ಕೋರಿರುತ್ತಾರೆ.

ಮೇಲೆ ಓದಲಾದ(5)ರ ಸರ್ಕಾರದ ಆದೇಶ ಸಂ:ಎಫ್‌ಡಿ 1 ಟಿಎಫ್‌ಪಿ 2021, ದಿನಾಂಕ:31-12-2021ರಲ್ಲಿ ನಾಲ್ಕನೇ ಕಂತಿನ ಅನುದಾನ ಬಿಡುಗಡೆಗೆ ಇಲಾಖಾ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ. ಅದರಂತೆ, 2021-22ನೇ ಸಾಲಿನಲ್ಲಿ ಸಂಸ್ಥೆಯ ಮತ್ತು ಸಂಸ್ಥೆಯ ಅಧೀನ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ವೇತನವನ್ನು ಪಾವತಿಸಲು ಮತ್ತು ಸಂಸ್ಥೆಯ ಸಾದಿಲ್ವಾರು ವೆಚ್ಚವನ್ನು ಭರಿಸಲು ಅನುದಾನದ ಅವಶ್ಯಕತೆಯಿರುವುದರಿಂದ, ಲೆಕ್ಕಶೀರ್ಷಿಕೆ:2515-00-102-0-08 ರಡಿ ನಿಗಧಿಪಡಿಸಲಾಗಿರುವ ರೂ.1531.00 ಲಕ್ಷಗಳ ಅನುದಾನದಲ್ಲಿ ಜನವರಿ-2022 ರಿಂದ ಮಾರ್ಚ್-2022ರ ವರೆಗಿನ ಮಾಹೆಗಳಿಗೆ ವೆಚ್ಚವನ್ನು ಭರಿಸಲು ಸರ್ಕಾರದ ಆದೇಶ ಸಂ:ಎಫ್‌ಡಿ 1 ಟಿಎಫ್‌ಪಿ 2021, ದಿನಾಂಕ:31-12-2021ರನ್ವಯ ನಾಲ್ಕನೇ ಕಂತಿನ (ಜನವರಿ, ಫೆಬ್ರುವರಿ ಮತ್ತು ಮಾರ್ಚ್-2022) ಅನುದಾನವಾಗಿ ರೂ.382.75 ಲಕ್ಷಗಳನ್ನು (ಮೂರು ನೂರು ಎಂಬತ್ತೆರಡು ಲಕ್ಷದ ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಂಸ್ಥೆಗೆ ಬಿಡುಗಡೆಗೊಳಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪಂರಾ 242 ಜಿಪಸ 2021, ದಿನಾಂಕ:28-02-2022.

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2021-22ನೇ ಸಾಲಿನ ಆಯವ್ಯಯದಲ್ಲಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗೆ ಲೆಕ್ಕಶೀರ್ಷಿಕೆ 2515-00-102-0-08 ರಡಿ ರೂ.1531.00 ಲಕ್ಷಗಳ ಅನುದಾನದಲ್ಲಿ ನಾಲ್ಕನೇ ಕಂತಿನ (ಜನವರಿ, ಫೆಬ್ರುವರಿ ಮತ್ತು ಮಾರ್ಚ್-2022ರ) ಅನುದಾನವಾಗಿ ರೂ.382.75 ಲಕ್ಷಗಳನ್ನು (ಮೂರು ನೂರು ಎಂಬತ್ತೆರಡು ಲಕ್ಷದ ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಈ ಕೆಳಕಂಡ ಕೋಷ್ಟಕದನ್ವಯ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಂಸ್ಥೆಗೆ ಬಿಡುಗಡೆಗೊಳಿಸಿ ಆದೇಶಿಸಿದೆ.

| ಕ್ರ.ಸಂ | ಲೆಕ್ಕ ಶೀರ್ಷಿಕೆ | 2021-22ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನ (ರೂ. ಲಕ್ಷಗಳಲ್ಲಿ) | ಏಪ್ರಿಲ್-2021 ರಿಂದ ಡಿಸೆಂಬರ್-2021ರವರೆಗೆ ಈಗಾಗಲೇ ಬಿಡುಗಡೆಗೊಳಿಸಿರುವ ಮೊದಲನೇ, ಎರಡನೇ ಮತ್ತು ಮೂರನೇ ತ್ರೈಮಾಸಿಕ ಅನುದಾನ (ರೂ. ಲಕ್ಷಗಳಲ್ಲಿ) | ಜನವರಿ 2022 ರಿಂದ ಮಾರ್ಚ್ 2022 ರವರೆಗೆ ಬಿಡುಗಡೆಗೊಳಿಸುತ್ತಿರುವ ನಾಲ್ಕನೇ ತ್ರೈಮಾಸಿಕ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|---|
| 1. | 2515-00-102-0-08-101 ( ಸಹಾಯಾನುದಾನ-ವೇತನಗಳು ) | 474.00 | 355.50 | 118.5 |
| 2. | 2515-00-102-0-08-103 ( ಸಹಾಯಾನುದಾನ-ಸಾಮಾನ್ಯ ) | 101.00 | 75.75 | 25.25 |
| 3. | 2515-00-102-0-08-115 (ಸಹಾಯಾನುದಾನ-ಗುತ್ತಿಗೆ/ ಹೊರಗುತ್ತಿಗೆ ) | 156.00 | 117.00 | 39.00 |
| 4. | 2515-00-102-0-08-386 (ನಿರ್ಮಾಣ) | 800.00 | 600.00 | 200.00 |
| ಒಟ್ಟು | | 1531.00 | 1148.25 | 382.75 |

ಈ ಆದೇಶವನ್ನು ಸರ್ಕಾರದ ಆದೇಶ ಸಂ:ಆಇ 1 ಟಿಎಫ್‌ಪಿ 2021, ದಿನಾಂಕ:31-12-2021 ರನ್ವಯ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

M.M. [signature] 28/2/22

**(ಎಂ.ಎಂ.ರಾಜು)**

ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

[signature] 28/2/22

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ನಂ.5398) ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಇ ಅಂಡ್ ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ನಂ.5398) ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ (ಪಿ.ಬಿ.ನಂ.5329) ಬೆಂಗಳೂರು.

4. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6. ಉಪ ನಿರ್ದೇಶಕರು, ಜಿಲ್ಲಾ ಖಜಾನೆ, ಮೈಸೂರು/ ಕಲಬುರ್ಗಿ/ಧಾರವಾಡ ಜಿಲ್ಲೆ.
7. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
8. ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು/ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಲು.
9. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ.

**ಪ್ರತಿಯನ್ನು ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾ.ಅ.ಪ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾ.ಅ.ಪ ಇಲಾಖೆ ಇವರ ಹಿರಿಯ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಜಂಟಿ ಕಾರ್ಯದರ್ಶಿ(ಪಂ.ರಾಜ್), ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕ, ಬಹುಮಹಡಿಗಳ ಕಟ್ಟಡ, ಬೆಂಗಳೂರು.